# ಉತ್ತಮ ವಿದ್ಯಾರ್ಥಿಯಾಗುವ ವಿಧಾನ




**ಕ**ಳೆದ ಮಂಗಳವಾರ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಮಾವೇಶ ಇತ್ತು. ಆರುನೂರು ಹಳೆಯ ವಿದ್ಯಾರ್ಥಿಗಳು ಅದರಲ್ಲಿ ಭಾಗವಹಿಸಿದ್ದರು. ಸಮಾವೇಶವು ವಿವಿಧ ಉಪನ್ಯಾಸಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಕೂಡಿತ್ತು. ನಂತರ, ಭಾಗವಹಿಸಿದ್ದ ಎಲ್ಲ ಹಳೆಯ ವಿದ್ಯಾರ್ಥಿಗಳು ಮತ್ತು ಈಗಿನ ವಿದ್ಯಾರ್ಥಿಗಳು ಕೂಡ ಫ್ರೂಟ್ ಸಾಲಡ್, ಕೇಕ್, ಐಸ್‌ಕ್ರೀಮ್ ಮತ್ತು ಸಿಹಿತಿಂಡಿಗಳನ್ನು ತಮಗೆ ತೃಪ್ತಿಯಾಗುವಂತೆ ಸವಿದರು.

ಪ್ರಸಿದ್ಧ ವಿಜ್ಞಾನಿಯಾದ ಡಾ. ಸುಬೋಧ್ ಉಪನ್ಯಾಸಕರಲ್ಲಿ ಒಬ್ಬರು. ಅವರು ಆ ಶಾಲೆಯ ಮೊದಲ ಬ್ಯಾಚಿನ ವಿದ್ಯಾರ್ಥಿ. ಅವರು ತಮ್ಮ ಪ್ರಭಾವಶಾಲಿ ಉಪನ್ಯಾಸದಿಂದ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು; ಕಷ್ಟಪಟ್ಟು ಓದಿ ಉತ್ಕೃಷ್ಟವಾದುದನ್ನು ಸಾಧಿಸಲು ಪ್ರೋತ್ಸಾಹಿಸಿದರು. "ಉತ್ತರಗಳನ್ನು ಗಟ್ಟಿಮಾಡಿ, ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯುವುದು ಸುಲಭ. ಆದರೆ, ವಿಷಯಗಳಲ್ಲಿ ನಿಪುಣತೆಯನ್ನು ಹೊಂದಲು ಅದರಿಂದ ಸಾಧ್ಯವಿಲ್ಲ. ಪಾಠಗಳನ್ನು ಅರ್ಥಮಾಡಿಕೊಂಡು, ಅವುಗಳಲ್ಲಿ ಪ್ರವೀಣತೆಯನ್ನು ಸಾಧಿಸುವುದು ತುಂಬಾ ಮುಖ್ಯ. ರಚನಾತ್ಮಕವಾಗಿ ಯೋಚಿಸಿ, ಸತ್ಯಶೋಧನೆಯನ್ನು ಮಾಡಿ. ವೈಚಾರಿಕ ಬುದ್ಧಿಯನ್ನು ಬೆಳೆಸಿಕೊಂಡು, ಆಳವಾಗಿ ಆಲೋಚಿಸಲು ಪ್ರಯತ್ನಿಸಿ. ನಿಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ನಿರಂತರವಾಗಿ ಪ್ರಯತ್ನಿಸಿ" ಎಂದು ಅವರು ಹೇಳಿದರು.

ಮರುದಿನ, ಕುಲಕರ್ಣಿ ಮೇಸ್ಟ್ರು ತರಗತಿಯನ್ನು ಪ್ರವೇಶಿಸಿದಾಗ, ವಿದ್ಯಾರ್ಥಿಗಳು ಡಾ. ಸುಬೋಧರ ಸಂದೇಶವನ್ನು ಅತ್ಯಂತ ಉತ್ಸಾಹದಿಂದ ಚರ್ಚಿಸುತ್ತಿದ್ದರು. ಸೀತಾ ಒಡನೆಯೇ ಎದ್ದು ನಿಂತು, "ಸರ್, ನಿನ್ನೆಯ ಸಮಾವೇಶದಲ್ಲಿ ಡಾ. ಸುಬೋಧ್ ರಚನಾತ್ಮಕವಾಗಿ ಆಲೋಚಿಸಲು ಹೇಳಿದರು. ಅದನ್ನು ಸ್ವಲ್ಪ ವಿವರಿಸುವಿರಾ?" ಎಂದು ಕೇಳಿದಳು. ಕುಲಕರ್ಣಿಯವರು, "ಅದನ್ನು ತಿಳಿಯಲಿಚ್ಛಿಸುತ್ತಿರುವ ನಿಮ್ಮೆಲ್ಲರ ಉತ್ಸಾಹವನ್ನು ಕಂಡು, ನನಗೆ ತುಂಬಾ ಸಂತೋಷವಾಗಿದೆ. ಈಗ ಗಣಿತದ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ನೀವೆಲ್ಲ ಗುಣಾಕಾರವನ್ನು ಕಲಿತಿರುವಿರಿ. ೧೦೦ಕ್ಕಿಂತ ಕಡಮೆಯಿರುವ ಈ ಎರಡು ಅಂಕಿಗಳನ್ನು ತೆಗೆದುಕೊಳ್ಳಿ – ೯೭ ಮತ್ತು ೯೫" ಎಂದು ಹೇಳಿ, ಕಪ್ಪುಹಲಗೆಯ ಮೇಲೆ ಕೆಳಗಿನ ಉದಾಹರಣೆಯನ್ನು ಬರೆದರು.

```
೯೭ x ೯೫
     ೪೮೫
   ೮೭೩
 = ೯೨೧೫
```

ನಂತರ ಕುಲಕರ್ಣಿಯವರು, "ಉತ್ತರವನ್ನು ಪಡೆಯಲು ಇದೊಂದು ವಿಧಾನ. ಇದೇ ಉತ್ತರವನ್ನು ಪಡೆಯಲು ಬೇರೆ ಯಾವುದಾದರೂ ವಿಧಾನವನ್ನು ಹೇಳಬಲ್ಲಿರಾ?" ಎಂದರು. ಆಗ ರಾಜೇಂದ್ರನು, "ಸರ್, Calculator ಅನ್ನು ಬಳಸಬಹುದು" ಎಂದು ಗಟ್ಟಿಯಾಗಿ ಕೂಗಿದನು. ಕುಲಕರ್ಣಿಯವರು, "ಅದು ರಚನಾತ್ಮಕ ಆಲೋಚನೆಯಲ್ಲ. 'ಲಾಗ್‌ಟೇಬಲ್' ಅನ್ನು ಉಪಯೋಗಿಸುವ ವಿಧಾನವೊಂದಿದೆ ಎಂದು ನೀನು ಹೇಳಿದ್ದರೆ ಆಗ ನಿನ್ನನ್ನು ಮೆಚ್ಚಬಹುದಾಗಿತ್ತು. ಈಗ ಹೇಳಿ. ಇನ್ನಾವುದಾದರೂ ಬೇರೆ ವಿಧಾನದಿಂದ ಉತ್ತರವನ್ನು ಪಡೆಯಬಹುದೇ?" ಎಂದರು. ವಿದ್ಯಾರ್ಥಿಗಳೆಲ್ಲ ಮೌನವಾಗಿ ಕುಳಿತರು. ಆಗ ಕುಲಕರ್ಣಿಯವರು, "ಆಯಿತು. ನಾನೀಗ ಮೂರು ಹಂತಗಳ ಹೊಸ ವಿಧಾನವನ್ನು ವಿವರಿಸುವೆ" ಎಂದರು.

**ಹಂತ ೧:** ೯೭ ಮತ್ತು ೯೫ ಕ್ಕೆ ಹತ್ತಿರದ ಮತ್ತು ನೂರರಿಂದ ಭಾಗಿಸಲ್ಪಡುವ ಸಂಖ್ಯೆಯೆಂದರೆ ೧೦೦. ನೂರರಿಂದ ಎರಡೂ ಅಂಕಿಗಳನ್ನು ಕಳೆಯಿರಿ. ೧೦೦–೯೭= ೩; ೧೦೦–೯೫ = ೫

**ಹಂತ ೨:** ಅಡ್ಡವಾಗಿ ಕಳೆಯಿರಿ. ಅಂದರೆ ೯೭–೫ = ೯೫–೩ = ೯೨ ಈಗ ಸಂಖ್ಯೆಯ ನಂತರ ಎರಡು ಸೊನ್ನೆಗಳನ್ನು ಸೇರಿಸಿ. ಇದರಿಂದ ನಮಗೆ ದೊರಕಿದ ಸಂಖ್ಯೆ : ೯೨೦೦.

**ಹಂತ ೩:** ೯೭ ಮತ್ತು ೯೫ ನ್ನು ೧೦೦ ರಿಂದ ಕಳೆದಾಗ ಬಂದ ಅಂಕಿಗಳನ್ನು ಗುಣಿಸಿ. ಅಂದರೆ, ೩ x ೫ = ೧೫ ಎರಡೂ ಸಂಖ್ಯೆಗಳನ್ನು ಕೂಡಿಸಿರಿ. ೯೨೦೦+೧೫ = ೯೨೧೫

ಆಶ್ಚರ್ಯಚಕಿತರಾದ ವಿದ್ಯಾರ್ಥಿಗಳು, ತುಂಬ ಉತ್ಸಾಹದಿಂದ ಬೇರೆ ಬೇರೆ ಸಂಖ್ಯೆಗಳನ್ನು ಉಪಯೋಗಿಸಿ ಈ ಬಗೆಯ ಲೆಕ್ಕವನ್ನು ಮಾಡತೊಡಗಿದರು. ಬೇರೆ ಬೇರೆ ವಿಧಾನಗಳಿಂದ ಒಂದೇ ಉತ್ತರವನ್ನು ಪಡೆಯಬಹುದೆಂದು ಕಂಡುಕೊಂಡರು. ಅವರ ಉತ್ಸಾಹವನ್ನು ಕಂಡು ಸಂತೋಷಗೊಂಡ ಕುಲಕರ್ಣಿಯವರು, "ಯಾವಾಗ ನೀವು ರಚನಾತ್ಮಕವಾಗಿ ಆಲೋಚಿಸುವಿರೋ, ಆಗ ನಿಮ್ಮ ಕಲ್ಪನಾಶಕ್ತಿಯು ಹೊರಹೊಮ್ಮುವುದು. ಬುದ್ಧಿಯು